ಕುಮಾರ ಚಲವಾದಿ, ಹೊಳೆನರಸಿಪುರ
*ದೇವರಿಗೂ ತಲೆ ತಗ್ಗಿಸದವನು ಇನ್ನಾರಿಗೆ ತಲೆ ತಗ್ಗಿಸಲು ಸಾಧ್ಯ ಗುರೂಜಿ?*



ಹೆಡ್ ಮಸಾಜ್ ಮಾಡುವವನಿಗೆ, ಕ್ಷೌರಿಕನಿಗೆ.

ಎಸ್. ಲಕ್ಷ್ಮೀನರಸಿಂಹ, ಚಾಮರಾಜನಗರ
*ಎಲ್ಲ ವಾಹಿನಿಗಳಿಂದಲೂ ದಬ್ಬಿಸಿಕೊಂಡರೂ ಬ್ರಹ್ಮಾಂಡ ಗುರೂಜಿಯ ಮಾತು, ನಡೆ, ನುಡಿ ಬದಲಾಗಲೇ ಇಲ್ಲವಲ್ಲ?*
ಆಕಾರದಲ್ಲಿ ಅಂಡ, ಮಾತಿನಲ್ಲಿ ಪಿಂಡ, ಬೊಗಳೆಯಲ್ಲಿ ಬ್ರಹ್ಮಾಂಡ ಇರುವುದರಿಂದ ಸಿಸ್ಟಂ ಕರಪ್ಟ್ ಆಗಿ ಕೊಲಾಪ್ಸ್ ಆಗಿ ಹಾಗಾಗಿದೆಯಂತೆ!

ಪಿ.ಎಸ್. ಶ್ರೀವತ್ಸ, ಬೆಂಗಳೂರು
*ಪರಿಹಾರಕ್ಕೂ, ಪರಿವಾರಕ್ಕೂ ಇರುವ ವ್ಯತ್ಯಾಸ?*
ಪರಿಸ್ಥಿತಿ ವಾವ್ ಎನ್ನುವಂತಿದ್ದರೆ ಪರಿವಾರ, ಪರಿಸ್ಥಿತಿ ಹಾ! ಎನ್ನುವಂತಿದ್ದರೆ ಪರಿಹಾರ!

ಎಂ.ಜಿ. ಚಿನ್ನಪ್ಪಸ್ವಾಮಿ, ಅರಬಿಳಚಿ ಕ್ಯಾಂಪ್
*ವೈದ್ಯರೇನೋ ದೇವರಿದ್ದಂತೆ; ಆದರೆ ನರ್ಸಮ್ಮ ಏನು?*



ರೋಗಿಯೆಂಬ ತಪಸ್ವಿಯ ಚಿತ್ತ ಅಪಹರಿಸುವ ಅಪ್ಸರೆ!

ಪುಟ್ಟಗೌರಿ ಚಿದಾನಂದ, ಗುಲ್ಬರ್ಗ
*ದೇಹಕ್ಕೂ, ಆತ್ಮಕ್ಕೂ ಎಂತಹ ಸಂಬಂಧವಿದೆ?*
ದೇಹ ಬಾಡಿಗೆ ಮನೆ, ಆತ್ಮ ಮನೆಯನ್ನು ಶಿಥಿಲವಾಗಿ ಬೀಳುವವರೆಗೂ ಬಳಸುವ ಬಾಡಿಗೆದಾರ.

ಡಾ. ಸೀಮಂತಿನಿ ದೇಸಾಯಿ, ವೈಟ್‌ಫೀಲ್ಡ್
*ನಿಮಗೆಂದಾದರೂ ನೀವು ವಿಕ್ರಮಾದಿತ್ಯನಂತೆಯೂ, ನಮ್ಮಂಥವರು ಬೇತಾಳದಂತೆಯೂ ಅನ್ನಿಸಿದ್ದುಂಟೆ ರಾಂಜೀ?*
ಇಲ್ಲಪ್ಪ. ಪ್ರಶ್ನಿಸುವವರೆಲ್ಲಾ ಅರ್ಜುನನಂತಹ ಅತಿರಥ, ಮಹಾರಥರೇ; ನಾನು ಸಾರಥಿ!

ಟಿ.ಎಂ. ಮಾನಪ್ಪ, ಶಿವಮೊಗ್ಗ
*ಪಾನಗಳಲ್ಲಿ ಶ್ರೇಷ್ಠ ಪಾನ ಯಾವುದು?*
ಸೋಪಾನ.

ರಮೇಶ. ಜ. ಬೊಂಗಾಳೆ, ಬೈಲಹೊಂಗಲ
*ರಾಗಗಳು ಏಳಾದರೆ ರೋಗಗಳು ಎಷ್ಟು?*
ಏಳಲಾಗದಷ್ಟು!

ಮಲ್ಲನಗೌಡ. ಗಂ. ಪಾಟೀಲ, ರಂಕಲಕೊಪ್ಪ
*ಕಲಿಯುಗದಲ್ಲಿ ಧರ್ಮವು ಒಂದೇ ಕಾಲಿನ ಮೇಲೆ ನಡೆಯುತ್ತಿದೆಯಂತೆ?*
ಹೌದು. ಅದೂ ಎಮರ್ಜೆನ್ಸಿ ಕಾಲ್ ಮೇಲೆ. ಇವತ್ತೋ, ನಾಳೆಯೋ ಫೈನಲ್ ಕಾಲ್ ಬರಬಹುದಂತೆ!

ಮಲ್ಲಿಕಾರ್ಜುನ. ಗಚ್ಚಿ, ಗೋಗಿ
*ಪತ್ರ ತಲುಪಿಸದ ಅಂಚೆಯಣ್ಣನಿಗೂ, ಪತ್ರ ಆಯ್ಕೆ ಮಾಡದ ನಿಮಗೂ ವ್ಯತ್ಯಾಸವನ್ನು ತಿಳಿಸಿ?*
ಅಂಚೆಯಣ್ಣನಿಗೆ ನಿಮ್ಮ ಮನೆಯ ವಿಳಾಸ ಅರ್ಥವಾಗಿಲ್ಲ, ನನಗೆ ನಿಮ್ಮ ಮನೋವಿಲಾಸ ಅರ್ಥವಾಗಿಲ್ಲ!

ಅನಂತಪದ್ಮನಾಭ ಹೆಚ್.ಎಂ. ಮೈಸೂರು
*ಭಾರತದ 1 ರೂಪಾಯಿ ಅಮೆರಿಕದ 1 ಡಾಲರ್‌ಗೆ ಯಾವಾಗ ಸಮ ಆಗುವುದು?*
ಟೈಮ್ ಮೆಷಿನ್‌ನಲ್ಲಿ ಕುಳಿತು 1930ನೆಯ ಇಸವಿಗೆ ಪ್ರಯಾಣ ಮಾಡಿದಾಗ.

ಹರಳಹಳ್ಳಿ ಪುಟ್ಟರಾಜು, ಪಾಂಡವಪುರ
*ಪ್ರೇಮಿಗಳ ಮಧ್ಯೆ ವಿಷದ ಬೀಜ ಬಿತ್ತುವ ಜನರನ್ನು ನೀವೇನಂತೀರಿ?*
ಟಿವಿ ಸೀರಿಯಲ್ ಸ್ಕ್ರಿಪ್ಟ್ ರೈಟರ್!

ಮುರಲೀಧರ ಕುಲಕರ್ಣಿ, ಬೀದರ್
*ಪಾರ್ಲಿಮೆಂಟ್ ಎಂದರೆ ಬುದ್ಧಿವಂತರ ಗುಂಪು ಎಂದು ಅರ್ಥವಂತೆ. ಈ ಮಾತು ನಮ್ಮ ಪಾರ್ಲಿಮೆಂಟಿಗೆ ಅನ್ವಯಿಸುವುದೆ?*
ಪಾರ್ಲಿಮೆಂಟ್ ಎಂದರೆ ಗೂಬೆಗಳ ಗುಂಪು ಎಂದೂ ಅರ್ಥವಿದೆ. ಅದು ಪೊಗದಸ್ತಾಗಿ ಅನ್ವಯಿಸುವುದು.

## ಬಹುಮಾನಿತ ಪ್ರಶ್ನೆ

ಮುರಲೀಧರ ಕುಲಕರ್ಣಿ, ಬೀದರ್
*ಮೊಬೈಲ್‌ಗೆ ನೀರು ಬೀಳಬಾರದೆಂದು ಕವರ್ ತೊಡಿಸುವ ಯುವಕರು ತಮ್ಮ ತಲೆಗೆ ಹೆಲ್ಮೆಟ್ ಏಕೆ ಧರಿಸುವುದಿಲ್ಲ?*
ತಮ್ಮ ಹೇರ್ ಸ್ಟೈಲ್ ನೋಡಿ ಹುಡು-ಗೀರು ಬೀಳಬೇಕೆಂದು!

ಪ್ರಕಾಶ್ ಸೋಡಾ ರಾಜಪ್ಪ, ಹೊಸನಗರ
*ಪ್ರಾಣಿಗಳ ಚಲನವಲನಕ್ಕೆ ಕಾಲರ್ ಐಡಿ ಬಳಸಿದಂತೆ ಹುಡುಗಿಯರಿಗೂ ಹಾಕಿದರೆ?*
ಹುಡುಗಿಯರು ಸಾಮಾನ್ಯವಾಗಿ ಕಾಲರ್ ಇಲ್ಲದ ಡ್ರೆಸ್ಸೇ ಹಾಕಿಕೊಳ್ಳೋದ್ರಿಂದ ಕಾಲರ್ ಐಡಿ ಹಾಕಕ್ಕಾಗಲ್ಲ!

ಸಂತೇಬೆನ್ನೂರು ಫೈಜ್ನಟ್ರಾಜ್, ಚನ್ನಗಿರಿ
*ಒಲವೆಂಬುದು ನೀಡುವುದಾ, ಪಡೆಯುವುದಾ ಸಾರ್?*
ಎರಡೂ ಅಲ್ಲ; ಮೂಡುವುದು, ಅನುಭವಿಸುವುದು.

ವಿ. ಹಮೀದ್, ವಿಟ್ಲ
*ಪತ್ನಿ ಕೊಡುವ ಭರವಸೆಗೂ, ಪ್ರಿಯತಮೆ ಕೊಡುವ ಭರವಸೆಗೂ ಇರುವ ವ್ಯತ್ಯಾಸವೇನು?*



ಪತ್ನಿಯ ಭರವಸೆ ಹಣತೆ; ಪ್ರಿಯತಮೆಯದು ಕೋಲ್ಮಿಂಚು.

ಆರ್. ಮಧುಸೂದನ್, ಹಾಸನ
*ಸಾಮಾನ್ಯವಾಗಿ ಡಾಕ್ಟರ್‌ಗಳು ನರ್ಸ್‌ಗಳನ್ನು ಮದುವೆಯಾಗುವುದಿಲ್ಲ. ಏಕೆ?*
ಹೃದಯ ಪ್ರೀತಿಯಿಂದ ಲಬ್‌ಡಬ್ ಎಂದರೂ ಇಸಿಜಿಗೆ ರೆಡಿ ಮಾಡಿಬಿಡುವುದರಿಂದ!

ಪಿ.ಜೆ. ರಾಘವೇಂದ್ರ, ಮೈಸೂರು
*ಇಲ್ಲೊಬ್ಬರು ತಮ್ಮ ನಾಯಿಗೆ ಸುಂದರಿ ಎಂದು ಹೆಸರಿಟ್ಟಿದ್ದಾರಲ್ಲಾ...?*
ತಿಳಿಯಿತು. ಮರಿಯಾಗಿದ್ದಾಗಿನಿಂದ ಅದು ಯಾವಾಗಲೂ ಕನ್ನಡಿಯ ಮುಂದೆಯೇ ಇರುತ್ತದೆ.

■ ರಾಮ್